ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ವೆಲ್‌ನಲ್ಲಿರುವ ಸದಸ್ಯರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಸಭಾನಾಯಕರು ಸುಮ್ಮನೆ ಕುಳಿತಿರುವುದನ್ನು ನೋಡಿದರೆ, ಇದರಲ್ಲಿ ಏನೋ ಅಡಗಿರುವುದು ಹೊರನೋಟಕ್ಕೆ ವ್ಯಕ್ತವಾಗುತ್ತಿದೆ. ಈ ವಿಚಾರದಲ್ಲಿ ಸಭಾನಾಯಕರು ಉತ್ತರವನ್ನು ಕೊಡಬಹುದಾಗಿತ್ತು. ವಿರೋಧಪಕ್ಷದವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸಭಾನಾಯಕರು ಮಧ್ಯಪ್ರವೇಶ ಮಾಡಬಹುದಾಗಿತ್ತು. ಅವರಿಂದ ಸರಿಯಾದ ಉತ್ತರವನ್ನು ನಾವು ಅಪೇಕ್ಷೆಪಟ್ಟಿದ್ದೆವು. ಅವರು ನಮ್ಮ ನಿರೀಕ್ಷೆಯ ರೀತಿಯಲ್ಲಿ ಅವರು ಉತ್ತರವನ್ನು ಕೊಡಲಿಲ್ಲ. ಉದ್ದೇಶಪೂರ್ವಕವಾಗಿ ಮಾಡಿರುವುದೆಂಬುದನ್ನು ಅವರು ಈಗ ಒಪ್ಪಿಕೊಂಡಿದ್ದಾರೆ. ಮೇಲ್ಮನವಿಗೆ ನ್ಯಾಯವನ್ನು ಚುನಾವಣೆಯಾದ ಮೇಲೆ ಕೊಡುತ್ತೀರಾ ಸ್ವಾಮಿ? ಕೆಎಂಎಫ್ ಚುನಾವಣೆಯಾದ ಮೇಲೆ ನಿಮಗೆ ಮೇಲ್ಮನವಿಯನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ಕೊಡುತ್ತೀರಾ? ಚುನಾವಣೆ ದೃಷ್ಟಿಯಿಂದ ಮಾಡುತ್ತಾರೆಂಬುದನ್ನು ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನೀವು ಅವರ ಸಲಹೆಯನ್ನು ಕೂಡ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದುದರಿಂದ, ನಾವು ಈ ನಿಲುವನ್ನು ಖಂಡಿಸಿ ವಾಕ್ ಔಟ್ ಮಾಡುತ್ತಿದ್ದೇವೆ.

[ಈ ಸಂದರ್ಭದಲ್ಲಿ ಜೆಡಿಎಸ್‌ನ ಸದಸ್ಯರುಗಳು ಸಭಾ ತ್ಯಾಗ ಮಾಡಿದರು.]

ಅಧ್ಯಕ್ಷರು:- ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಚರ್ಚೆ ಆರಂಭಿಸುವರು.

ಶ್ರೀ ಸಿದ್ದರಾಮಯ್ಯ :- ಸೋಮವಾರ ಪ್ರಶ್ನೋತ್ತರವೇಳೆಯಾದ ಮೇಲೆ ತೆಗೆದುಕೊಳ್ಳಿ, ಸುರೇಶ್ ಕುಮಾರ್, ನಿನ್ನೆ ತಾವು ಹೇಳಿದಿರೆಂದು ಒಪ್ಪಿಕೊಂಡೆ.

ಶ್ರೀ ಎಸ್.ಸುರೇಶ್ ಕುಮಾರ್ :- ಬಹಳ ಧನ್ಯವಾದಗಳು.

ಅಧ್ಯಕ್ಷರು :- ಆಯಿತು, ಈಗ ವಿತ್ತೀಯ ಕಾರ್ಯಕಲಾಪ.

4.ವಿತ್ತೀಯ ಕಾರ್ಯಕಲಾಪ

2009–10ನೇ ಸಾಲಿನ ಬೇಡಿಕೆಗಳ ಮಂಡನೆ.

ಬೇಡಿಕೆ ಸಂಖ್ಯೆ:1–ಕೃಷಿ

ಶ್ರೀ ಎಸ್.ಎ.ರವೀಂದ್ರನಾಥ್(ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31.3.2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

[ಪ್ರಸ್ತಾವವನ್ನು ಮಂಡಿಸಲಾಯಿತು]

ಬೇಡಿಕೆ ಸಂಖ್ಯೆ:2–ಪಶುಸಂಗೋಪನೆ ಮತ್ತು ಮೀನುಗಾರಿಕೆ.

ಶ್ರೀ ಎಸ್.ಸುರೇಶ್ ಕುಮಾರ್[ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು ಪರವಾಗಿ]:– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31.3.2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ: 2ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

[ಪ್ರಸ್ತಾವನವನ್ನು ಮಂಡಿಸಲಾಯಿತು]

ಬೇಡಿಕೆ ಸಂಖ್ಯೆ:7–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 7ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ

ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

[ಪ್ರಸ್ತಾಪವನ್ನು ಮಂಡಿಸಲಾಯಿತು]

ಬೇಡಿಕೆ ಸಂಖ್ಯೆ: 14 ಕಂದಾಯ

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,.....

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು ಸದನದಲ್ಲಿ ಬೇಡಿಕೆಗಳನ್ನು ಮಂಡಿಸುವುದಕ್ಕೂ ಇರುವುದಿಲ್ಲವೆಂದರೆ, ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ಕಲಾಪ ನಡೆಯುತ್ತಿರುವುದರಿಂದ ಸಂಬಂಧಪಟ್ಟ ಸಚಿವರು ಅಲ್ಲಿದ್ದಾರೆ. ನನ್ನ ಪ್ರಶ್ನೆ ಮುಗಿಸಿಕೊಂಡು ನಾನು ಈಗ ತಾನೆ ಅಲ್ಲಿಂದ ಬಂದೆ. ಮುಗಿಸಿಕೊಂಡು ಇಲ್ಲಿಗೆ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ಇಲ್ಲಿ ಬೇಡಿಕೆ ಇಟ್ಟು ವಿದಾನ ಪರಿಷತ್ತಿನಲ್ಲಿ ವಿತ್ತೀಯ ಕಾರ್ಯಕಲಾಪ ನಡೆಯುತ್ತದೆಯಾ? Animal Husbandry Minister ಮತ್ತು Rural Development Minister ಎಲ್ಲಾ, ಇದ್ದಾರಾ?

ಶ್ರೀ ಕೆ.ಎಸ್. ಈಶ್ವರಪ್ಪ: ನನ್ನ ಪ್ರಶ್ನೆಯೂ ಅಲ್ಲಿತ್ತು ಅದನ್ನು ಮುಗಿಸಿಕೊಂಡು ಬಂದಿದ್ದೇನೆ. ಇಬ್ಬರೂ ಅಲ್ಲಿಯೇ ಇದ್ದಾರೆ.

ಶ್ರೀ ಸಿದ್ದರಾಮಯ್ಯ: My point is ಏನು ಅಂದರೆ general Question Hourಗೆ ಹೋಗಿದ್ದಾರೆ, Ok. ಇಲ್ಲಿ ಡಿಮಾಂಡ್ಸ್ important ಅವರೇ ಮಂಡಿಸಬೇಕು. ಕಾಗದಪತ್ರಗಳನ್ನು ಮಂಡಿಸುವಾಗ ನೀವು ಯಾರೋ ಮಂತ್ರಿಗಳು ಮಂಡಿಸಬಹುದು. ಅವರವರ ಇಲಾಖೆಗೆ ಸಂಬಂಧಪಟ್ಟ ಡಿಮಾಂಡ್ಸ್ ಮಂಡಿಸುವಾಗ ಅವರೇ ಖುದ್ದಾಗಿ ಇದ್ದು ಡಿಮಾಂಡ್ಸ್ ಮಂಡಿಸಿ ಇದನ್ನು ಅಪ್ರೂವ್ ಮಾಡಿಕೊಡಿ ಎಂದು ಮನವಿ ಮಾಡಬೇಕು. ಅದು ಬಿಟ್ಟು ಅವರು ಅಲ್ಲಿ ಇಲ್ಲಿ ಹಪಗಿ ಮಾಡುವುದಕ್ಕಾಗುವುದಿಲ್ಲ. ಆ ಸಂಪ್ರಾದಾಯ ಇರಬಾರದು.

ಅಧ್ಯಕ್ಷರು :- ಪ್ರಶ್ನೋತ್ತರ ಇರುವುದರಿಂದ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಈಶ್ವರಪ್ಪನವರೇ ಕುಳಿತುಕೊಳ್ಳಿ. ಕೆಟ್ಟ ಸಂಪ್ರಾದಯ ಆಗಬಾರದು. ಹಿಂದಿನಿಂದ ಹೇಗೆ ಬಂದಿದೆ ಎಂದರೆ, ಡಿಮಾಂಡ್ಸ್‌ಗಳು ಇರುವಾಗ ಸಂಬಂಧಪಟ್ಟ ಮಂತ್ರಿಗಳೇ ಡಿಮಾಂಡ್ಸ್ ಮೂವ್ ಮಾಡಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮೂವ್ ಮಾಡುವುದು ಬೇರೆ. ಆದರೆ ಎಲ್ಲಾ

ಮಂತ್ರಿಗಳು ಕೂಡ ಅವರವರ ಡಿಮಾಂಡ್ಸ್ ಬಂದಾಗ ಅವರೇ ಮೂವ್ ಮಾಡಬೇಕು.

ಬೇಡಿಕೆ ಸಂಖ್ಯೆ: 14–ಕಂದಾಯ ಇಲಾಖೆ

ಶ್ರೀ ಜಿ. ಕರುಣಾಕರ ರೆಡ್ಡಿ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 14ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ:20–ಲೋಕೋಪಯೋಗಿ ಇಲಾಖೆ

ಶ್ರೀ ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 20ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

(ಅನುಬಂಧ–II)

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 12.53 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 13ನೇ ಜುಲೈ 2009ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು